MGNREGA

ಕರ್ನಾಟಕ ಸರ್ಕಾರ

# ಜಿಲ್ಲಾ ಪಂಚಾಯಿತಿ, ಚಿಕ್ಕಮಗಳೂರು.
## (ಅಭಿವೃದ್ಧಿ ಶಾಖೆ)

ದಿ:09.11.2021

### -: ಅಧಿಸೂಚನೆ :-

ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಚಿಕ್ಕಮಗಳೂರು ಜಿಲ್ಲಾ ಪಂಚಾಯತಿ ವ್ಯಾಪ್ತಿಯಲ್ಲಿ ಖಾಲಿ ಇರುವ/ಹೊಸದಾಗಿ ಮಂಜೂರಾಗಿರುವ ಈ ಕೆಳಕಂಡ ಹುದ್ದೆಗಳನ್ನು, ಮಾನವ ಸಂಪನ್ಮೂಲ ಸಂಸ್ಥೆಯ ಮೂಲಕ ಹೊರಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಆನ್ ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಿದೆ.

### -: ಹುದ್ದೆಗಳ ವಿವರ :-

| ಕ್ರ. ಸಂ | ಹುದ್ದೆಯ ಹೆಸರು | ಹುದ್ದೆಗಳ ಸಂಖ್ಯೆ | ವಿದ್ಯಾರ್ಹತೆ | ಅಪೇಕ್ಷಣೀಯ | ವಯೋಮಿತಿ | ಅನುಭವ | ಮಾಸಿಕ ಸಂಭಾವನೆ |
|---|---|---|---|---|---|---|---|
| 1 | ಜಿಲ್ಲಾ ಐ.ಇ.ಸಿ ಸಂಯೋಜಕ | 1 | Post Graduation in Mass Communication or any post graduation with diploma in mass communication or related subjects and computer knowledge. In the absence of the such candidates mentioned above any post graduation with computer knowledge. | — | 23-40 | 2-3 ವರ್ಷಗಳು | 25,000/- |
| 2. | ತಾಲ್ಲೂಕು ಐ.ಇ.ಸಿ ಸಂಯೋಜಕ | 1 | | | 23-40 | 2-3 ವರ್ಷಗಳು (ಅನುಭವ ನಮೂದಿಸುವುದು) | 20,000 |
| 3 | ತಾಂತ್ರಿಕ ಸಹಾಯಕ (ಕೃಷಿ, ತೋಟಗಾರಿಕೆ) | 3 | Bsc (Agri)<br>Bsc (Horticulture)<br>With computer Knowledge | Msc (Agri) Msc (Horticulture) ಸಂಬಂಧಿಸಿದ ಕ್ಷೇತ್ರದಲ್ಲಿ ಕಾರ್ಯಾನುಭವ. | 21-40 | (ಅನುಭವ ನಮೂದಿಸುವುದು) | 24,000/- (ಪ್ರಯಾಣ ಭತ್ಯೆ ಪ್ರತಿ ಕಿ.ಮೀ 5ರೂ ನಂತೆ ಗರಿಷ್ಠ ಮಾಸಿಕ ರೂ.1500/-) |
| 4 | Administative Assistant | 7 | Bachelor of Commerce.<br>Well Versed in Kannada English Typing.<br>computer Knowledge in MS-Word,Exel,Power-Point Computer. | — | 21-40 | — | ಕಾರ್ಮಿಕ ಇಲಾಖೆಯು ತಾಲ್ಲೂಕು ಮಟ್ಟದಲ್ಲಿ ಡೇಟಾ ಎಂಟ್ರಿ ಆಪರೇಟರ್ ಹುದ್ದೆಗೆ ನಿಗದಿಪಡಿಸಿ ಕನಿಷ್ಠ ಮೊತ್ತ |

## ಸೂಚನೆಗಳು

1. ಅರ್ಜಿ ಸಲ್ಲಿಸಲು ಪ್ರಾರಂಭದ ದಿನಾಂಕ:08.11.2021 ಮತ್ತು ಕೊನೆಯ ದಿನಾಂಕ:18.11.2021

2. ಸರ್ಕಾರಿ ಕೆಲಸದ ಅವಧಿಯಲ್ಲಿ ಮಾತ್ರ ಆನ್‌ಲೈನ್ ಅರ್ಜಿಗಳನ್ನು ಸಲ್ಲಿಸತಕ್ಕದ್ದು ಬೆಳಿಗ್ಗೆ 10:00 ಗಂಟೆಯಿಂದ ಸಂಜೆ 05:30 ಗಂಟೆಯವರಗೆ. (ಸರ್ಕಾರಿ ರಜೆಯದಿನ ಆನ್ ಲೈನ್ ಅರ್ಜಿಗಳು ಸ್ವೀಕೃತಿಯಾಗುವದಿಲ್ಲ.)

3 ಅರ್ಜಿಗಳನ್ನು: https://chikkamagaluru.nic.in ವೆಬ್ ಸೈಟ್‌ನ ಮುಖಾಂತರ ಅರ್ಜಿ ಸಲ್ಲಿಸುವುದು.

## ಆಯ್ಕೆ ವಿಧಾನ

1. ಆಯ್ಕೆಯಾದ ಅಭ್ಯರ್ಥಿಯನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲಾಗುವುದು.

2. ನಿಗದಧಿಪಡಿಸಿದ ಹುದ್ದೆಗಳಿಗೆ ಅನುಗುಣವಾಗಿ ವಿದ್ಯಾರ್ಹತೆ ಹೊಂದಿರಬೇಕು.

3. ನೇಮಕಾತಿ ಅವಧಿಯು 11 ತಿಂಗಳಾಗಿದ್ದು, ಇವರ ಕಾರ್ಯಕ್ಷಮತೆ ಪರಿಶೀಲಿಸಿ ಮುಂದುವರೆಸುವ ಬಗ್ಗೆ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತೀರ್ಮಾನ ಕೈಗೊಳ್ಳುವುದು.

4. ದಾಖಲಾತಿ ಪರಿಶೀಲನೆ ನಂತರ ಅರ್ಹ ಅಭ್ಯರ್ಥಿಗಳನ್ನು ಮೆರಿಟ್ ಆಧಾರದ ಮೇಲೆ ಆಯ್ಕೆ ಮಾಡಲು ನಿಗಧಿಪಡಿಸಿದ ವಿದ್ಯಾರ್ಹತೆ ಮತ್ತು ಅನುಭವವನ್ನು ಪರಿಗಣಿಸಿ ಈ ಕೆಳಕಂಡ ಮಾನದಂಡಗಳಲ್ಲಿ ಮೆರಿಟ್ ಪಟ್ಟಿ ತಯಾರಿಸುವುದು.

**(ಅ) ಜಿಲ್ಲಾ IEC ಮತ್ತು ತಾಲ್ಲೂಕು IEC ಹುದ್ದೆ :**

**1.**ಕನಿಷ್ಠ ವಿದ್ಯಾರ್ಹತೆಗೆ 60 ಅಂಕಗಳು (ಉ.ದಾ : ಸ್ನಾತಕೋತ್ತರ ಪದವಿಯಲ್ಲಿ ಶೇಕಡ 70 ಅಂಕಗಳನ್ನು ಪಡೆದಿದ್ದಲ್ಲಿ, ಆ ಅಭ್ಯರ್ಥಿಗೆ 70*60%100=42 ಅಂಕಗಳನ್ನು ನೀಡುವುದು.)

**2.** ಸಂಬಂಧಿಸಿದ ಕಾರ್ಯಕ್ಷೇತ್ರದಲ್ಲಿ 36 ತಿಂಗಳ ಅಥವಾ ಅದಕ್ಕಿಂತ ಹೆಚ್ಚಿನ ಕಾರ್ಯಾನುಭವಕ್ಕಾಗಿ (Experience)-ಗರಿಷ್ಠ 20 ಅಂಕಗಳು (ಅಂದರೆ ಒಂದು ತಿಂಗಳ ಕಾರ್ಯಾನುಭವಕ್ಕಾಗಿ 0.55 ಅಂಕಗಳು, ಉದಾಹರಣೆಗೆ 36 ತಿಂಗಳ ಅನುಭವ ಹೊಂದಿದ್ದಲ್ಲಿ 36*0.55=20 ಅಂಕಗಳನ್ನು ನೀಡುವುದು, 36 ತಿಂಗಳ ಕಾರ್ಯಾನುಭವಕ್ಕೆ ಸಂಬಂಧಿಸಿದಂತೆ ವೇತನ ಪಡೆದಿರುವ ಕುರಿತು, ಮೂಲ ದಾಖಲಾತಿ ಪರಿಶೀಲನೆಯ ಸಂದರ್ಭದಲ್ಲಿ ಕಡ್ಡಾಯವಾಗಿ ಹಾಜರುಪಡಿಸಿವುದು.)

**3.** ಕಂಪ್ಯೂಟರ್ ಜ್ಞಾನ ಮತ್ತು ಟೈಪಿಂಗ್ ಗೆ 20 ಅಂಕಗಳು (Well Versed in Kannada English Typing. computer Knowledge in MS-Word, Exel,Power-Point Computer)

4.**ಒಟ್ಟು ಅಂಕಗಳು = 100**

**(ಆ) ತಾಂತ್ರಿಕ ಸಹಾಯಕ (ಕೃಷಿ, ತೋಟಗಾರಿಕೆ) :**

1.ಕನಿಷ್ಠ ವಿದ್ಯಾರ್ಹತೆಗೆ 60 ಅಂಕಗಳು (ಉ.ದಾ : ಪದವಿಯಲ್ಲಿ ಶೇಕಡ 70 ಅಂಕಗಳನ್ನು ಪಡೆದಿದ್ದಲ್ಲಿ, ಆ ಅಭ್ಯರ್ಥಿಗೆ 70*60%100=42 ಅಂಕಗಳನ್ನು ನೀಡುವುದು.)

2.ಸ್ನಾತಕೋತ್ತರ ಪದವಿ ವಿದ್ಯಾರ್ಹತೆಗೆ-20 ಅಂಕಗಳು (ಉದಾಹರಣೆಗೆ ಸ್ನಾತಕೋತ್ತರ ಪದವಿಯಲ್ಲಿ ಶೇಕಡ 70 ಅಂಕಗಳನ್ನು ಪಡೆದಿದ್ದಲ್ಲಿ, ಆ ಅಭ್ಯರ್ಥಿಗೆ 70*20%100=14 ಅಂಕಗಳನ್ನು ನೀಡುವುದು.)

3.ಸಂಬಂಧಿಸಿದ ಕಾರ್ಯಕ್ಷೇತ್ರದಲ್ಲಿ 36 ತಿಂಗಳ ಅಥವಾ ಅದಕ್ಕಿಂತ ಹೆಚ್ಚಿನ ಕಾರ್ಯಾನುಭವಕ್ಕಾಗಿ (Experience)-ಗರಿಷ್ಠ 10 ಅಂಕಗಳು (ಅಂದರೆ ಒಂದು ತಿಂಗಳ ಕಾರ್ಯಾನುಭವಕ್ಕಾಗಿ 0.27 ಅಂಕಗಳು, ಉದಾಹರಣೆಗೆ 36 ತಿಂಗಳ ಅನುಭವ ಹೊಂದಿದ್ದಲ್ಲಿ 36*0.27=10 ಅಂಕಗಳನ್ನು ನೀಡುವುದು, 36 ತಿಂಗಳ ಕಾರ್ಯಾನುಭವಕ್ಕೆ ಸಂಬಂಧಿಸಿದಂತೆ ವೇತನ ಪಡೆದಿರುವ ಕುರಿತು, ಮೂಲ ದಾಖಲಾತಿ ಪರಿಶೀಲನೆಯ ಸಂದರ್ಭದಲ್ಲಿ ಕಡ್ಡಾಯವಾಗಿ ಹಾಜರುಪಡಿಸಿವುದು.)

4.**ಒಟ್ಟು ಅಂಕಗಳು = 100**

(೨) ಆಡಳಿತ ಸಹಾಯಕ (Administative Assistant) : ನಿಗಧಿಪಡಿಸಿದ ವಿದ್ಯರ್ಹತೆಗೆ ಅನುಗುಣವಾಗಿ ಮೆರಿಟ್ ಪಟ್ಟಿ 1.ತಯಾರಿಸಿ, ಮೆರಿಟ್ ಪಟ್ಟಿಯಲ್ಲಿನ ಅಭ್ಯರ್ಥಿಗಳು ಮೇಲೆ ತಿಳಿಸಿದ ಟೈಪಿಂಗ್, ಮತ್ತು ಕಂಪ್ಯೂಟರ್ ಜ್ಞಾನ ಹೊಂದಿರುವುದನ್ನು (Well Versed in Kannada English Typing. computer Knowledge in MS-Word, Exel,Power-Point Computer) ಪ್ರಾಯೋಗಿಕ ಪರೀಕ್ಷೆಯ ಮೂಲಕ ಖಚಿತಪಡಿಸಿಕೊಂಡು ಆಯ್ಕೆಗೆ ಕ್ರಮವಹಿಸಲಾಗುವುದು.

(ಕನಿಷ್ಠ ವಿದ್ಯಾರ್ಹತೆಗೆ 60 ಅಂಕಗಳು (ಉ.ದಾ: ಬಿ.ಕಾಂ ಪದವಿಯಲ್ಲಿ ಶೇಕಡ 70 ಅಂಕಗಳನ್ನು ಪಡೆದಿದ್ದಲ್ಲಿ, ಆ ಅಭ್ಯರ್ಥಿಗೆ 70*60%100=42 ಅಂಕಗಳನ್ನು ನೀಡುವುದು.)

2.ಕನ್ನಡ ಮತ್ತು ಇಂಗ್ಲೀಷ್ ಟೈಪಿಂಗ್ ಗೆ 20 ಅಂಕಗಳು, computer Knowledge in MS-Word, Exel,Power-Point Computer ಗೆ 20 ಅಂಕಗಳು,

3. **ಒಟ್ಟು ಅಂಕಗಳು = 100**

ಅಭ್ಯರ್ಥಿಗಳು ಹುದ್ದೆಗೆ ನಿಗಧಿಪಡಿಸಿದ ವಿದ್ಯಾರ್ಹತೆಗೆ ಪದವಿ/ಸ್ನಾತಕೊತ್ತರ ಪದವಿ ಮತ್ತು ಕಾರ್ಯಾನುಭವಕ್ಕೆ ಸಂಬಂಧಿಸಿದಂತೆ ನಮೂದಿಸುವ ವಿವರದ ಆಧಾರದ ಮೇಲೆ ಮೆರಿಟ್ ಪಟ್ಟಿ ತಯಾರಿಸಿ 1:5 ಅನುಪಾತದಂತೆ ಅಭ್ಯರ್ಥಿಗಳನ್ನು ಮೂಲ ದಾಖಲಾತಿ ಪರಿಶೀಲನೆಗೆ ಆಹ್ವಾನಿಸಲಾಗುವುದು. ಸದರಿ ಮಾಹಿತಿಯನ್ನು https://chikkamagaluru.nic.in ನಲ್ಲಿ upload ಮಾಡಲಾಗುವುದು.

5.ಒಂದು ವೇಳೆ ಮೆರಿಟ್ ಆಧಾರದ ಮೇರೆಗೆ ಆಯ್ಕೆಯಾದ ಅಭ್ಯರ್ಥಿಗಳು ಕರ್ತವ್ಯಕ್ಕೆ ಹಾಜರಾಗದಿದ್ದಲ್ಲಿ, ಅಂತಹ ಅಭ್ಯರ್ಥಿಗಳ ಆಯ್ಕೆಯನ್ನು ರದ್ದುಗೊಳಿಸುವುದು ಮತ್ತು ಮೆರಿಟ್ ಆಧಾರದ ಪ್ರತೀಕ್ಷಾ ಪಟ್ಟಿಯಲ್ಲಿರುವ (Waiting List) ಅಭ್ಯರ್ಥಿಗಳನ್ನು ಆಯ್ಕೆಗೆ ಪರಿಗಣಿಸುವುದು.

ಈ ಮೇಲ್ಕಂಡ ಎಲ್ಲಾ ದಾಖಲಾತಿ ಪರಿಶೀಲನೆ ಹಾಗು ಮೇರಿಟ್ ಪಟ್ಟಿಯನ್ನು ಸಿದ್ದಪಡಿಸಿರುವ ಪ್ರಕ್ರಿಯೆಯನ್ನು ಹೊರಗುತ್ತಿಗೆ ಮಾನವ ಸಂಪನ್ಮೂಲ ಸಂಸ್ಥೆಯು ನಿರ್ವಹಿಸುವುದು.

ಅಭ್ಯರ್ಥಿಗಳು, ಅರ್ಜಿ ಸಲ್ಲಿಸುವ ಹುದ್ದೆಗೆ ಸಂಬಂಧಿಸಿದಂತೆ ಸರ್ಕಾರವು ನಿಗಧಿಪಡಿಸಿದ ವಿದ್ಯಾರ್ಹತೆಯನ್ನು, ಕಂಪ್ಯೂಟರ್ ಜ್ಞಾನ ಮತ್ತು ಕೌಶಲ್ಯವನ್ನು ಕಡ್ಡಾಯವಾಗಿ ಹೊಂದಿರಬೇಕು. ಅಭ್ಯರ್ಥಿಯ ಆಯ್ಕೆಯನ್ನು ಪರಿಗಣಿಸುವ ಮತ್ತು ತೆಗೆದುಹಾಕುವ ಅಧಿಕಾರವನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿಯವರು ಅಧಿಕಾರ ಹೊಂದಿರುತ್ತಾರೆ.

ಹೆಚ್ಚಿನ ಮಾಹಿತಿಗಾಗಿ: ಶ್ರೀ ಮಹಾಬಲೇಶ್ವರ ಎಂಟರಪ್ರೈಸಸ್, 71/2, 1ನೆಯ ಅಡ್ಡರಸ್ತೆ ಮತ್ತಿಕೆರೆ ಬೆಂಗಳೂರು –54, ದೂರವಾಣಿ ಸಂಖ್ಯೆ: 080-23602667 ಸಂಪರ್ಕಿಸುವುದು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಪರವಾಗಿ
ಜಿಲ್ಲಾ ಪಂಚಾಯತಿ, ಚಿಕ್ಕಮಗಳೂರ